# Anti Land-Grabbing Action Committee
# ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

**No. 759, 5th Main, 8th Cross, R.T.Nagar, II Block, Bangalore 560032 Ph: 094481 20305**
**Website : http://savekarnataka.in email: karnatakasave@gmail.com**


**9th February 2017**

ಗೆ,
ಸನ್ಮಾನ್ಯ ನ್ಯಾ. ಶ್ರೀ. ಎಚ್. ಎನ್. ನಾರಾಯಣ
ಅಧ್ಯಕ್ಷರು ,
ಭೂಕಬಳಿಕೆ ನಿಷೇದ ಕಾಯ್ದೆ ವಿಶೇಷ ನ್ಯಾಯಾಲಯ,
ಕಂದಾಯ ಭವನ, ಬೆಂಗಳೂರು.

ಮಾನ್ಯರೆ ,

ವಿಷಯ: ವಿಶೇಷ ನ್ಯಾಯಾಲಯವು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಅಗತ್ಯ ಆಡಳಿತ ಸಿಬ್ಬಂಧಿ ಮತ್ತು ಇತರೆ ಸೌಲಭ್ಯಗಳು ಹಾಗೂ ವಿವಿಧ ಇಲಾಖೆಗಳ, ಶಾಸನಬದ್ದ ಸಂಸ್ಥೆಗಳ ಜಮೀನುಗಳು ಕಬಳಿಕೆ ಆಗಿರುವ ಬಗ್ಗೆ ಮಾಹಿತಿಗಳನ್ನು ವಿಶೇಷ ನ್ಯಾಯಾಲಯಕ್ಕೆ ಒದಗಿಸದಿರುವ ಬಗ್ಗೆ.

ಕರ್ನಾಟಕದಲ್ಲಿ ಲಕ್ಷಾಂತರ ಎಕರೆ ಸರ್ಕಾರಿ ಭೂಮಿಗೆ ಸುಳ್ಳು ದಾಖಲೆ ಸೃಷ್ಟಿಸಿ ಪ್ರಭಾವಿಗಳು ಕಬಳಿಕೆ ಮಾಡಿರುವ ವಿಷಯ ಸನ್ಮಾನ್ಯರಾದ ತಮಗೂ ತಿಳಿದಿದೆ ಎಂದು ನಂಬಿದ್ದೇವೆ. '*ಬೆಂಗಳೂರು ನಗರ /ನಗರ ಜಿಲ್ಲೆಯಲ್ಲಿ ಸರ್ಕಾರಿ ಜಾನೀನು ಒತ್ತುವರಿ*' ಕುರಿತು ರಚಿಸಲಾದ ಜಂಟಿ ಸದನ ಸಮಿತಿಯು 19.11.2007ರಂದು ಅಂದಿನ ವಿಧಾನ ಸಭಾಧ್ಯಕ್ಷರಿಗೆ ಸಲ್ಲಿಸಿದ ಅಂತಿಮ ಸಾರಾಂಶದಲ್ಲಿ ಕೇವಲ ಬೆಂಗಳೂರು ನಗರ /ನಗರ ಜಿಲ್ಲೆಯೊಂದರಲ್ಲಿಯೇ 41,303 ಎಕರೆ ಸರ್ಕಾರಿ ಭೂಮಿ ಒತ್ತುವರಿ/ಕಬಳಿಕೆಯಾಗಿದೆ ಎಂದು ತಿಳಿಸಿತ್ತು (ಅನುಬಂಧ -1). ವರದಿಯಲ್ಲಿ ಹಲವಾರು ನಿರ್ದಿಷ್ಟ ಪ್ರಕರಣಗಳ ಬಗ್ಗೆ ವಿವರಿಸಲಾಗಿತ್ತು. ಆಗ ಯಾವ ಕ್ರಮಗಳನ್ನು ತೆಗೆದುಕೊಳ್ಳದ ಕಾರಣ ಅಂದಿನಿಂದ ಇಂದಿನವರೆವಿಗೂ ಲಕ್ಷಾಂತರ ಎಕರೆ ಸರ್ಕಾರಿ ಭೂಮಿ ಕಬಳಿಕೆಯಾಗಿರುವುದು ದುರದೃಷ್ಟಕರ. ನಮ್ಮ ಅಂದಾಜಿನಲ್ಲಿ ಕನಾಟಕದಲ್ಲಿ ಸುಮಾರು 4 ಲಕ್ಷ ಕೋಟಿ ಬೆಲೆಬಾಳುವ 4 ಲಕ್ಷ ಎಕರೆ ಸರ್ಕಾರಿ ಭೂಮಿಗೆ ಅಧಿಕಾರಿಗಳ ಸಹಯೋಗದಾಂದಿಗೆ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಪ್ರಭಾವಿಗಳು ಭೂಕಬಳಿಕೆ ಮಾಡಿರುವುದು ಅತ್ಯಂತ ದೊಡ್ಡ ಹಗರಣವಾಗಿದೆ. ಇದರ ಬಗ್ಗೆ ಸಮರೋಪಾದಿಯಲ್ಲಿ ತನಿಖೆ ನಡೆಸಿ, ಕಬಳಿಕೆಯಾಗಿರುವ ಸರ್ಕಾರಿ ಭೂಮಿಯನ್ನು ಪುನಃ ಸರ್ಕಾರದ ವಶಕ್ಕೆ ಪಡೆದು ಮುಂದಿನ ಪೀಳಿಗೆಗಾಗಿ ಸಾರ್ವಜನಿಕ ಹಿತಕ್ಕಾಗಿ ಕಾಯ್ದಿರಿಸಬೇಕಾದ ಅನಿವಾರ್ಯತೆ ಇದೆ. ಪ್ರಕರಣಗಳ ಬಗ್ಗೆ ಮಾಹಿತಿ ಇದ್ದರೂ ಸರ್ಕಾರ ಮತ್ತು ಇಲಾಖೆಗಳು ಸರಕಾರಿ ಭೂಮಿಯನ್ನು ರಕ್ಷಿಸುವಲ್ಲಿ ವಿಫಲರಾಗಿದ್ದಾರೆ.

ಹೋರಾಟಗಾರರ ಒತ್ತಾಯದಿಂದ ಭೂಕಬಳಿಕೆ ನಿಷೇದ ಕಾಯ್ದೆ ಜಾರಿಗೆ ಬಂದಿದ್ದು, ತಡವಾಗಿಯಾದರೂ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿರುವುದು ಸ್ವಾಗತಾರ್ಹ. ಆದರೆ ಸರ್ಕಾರ ವಿಶೇಷ ನ್ಯಾಯಾಲಯಕ್ಕೆ ಸರಿಯಾದ ಆಡಳಿತ ವಿಭಾಗ, ಅಭಿಯೋಜನೆ ವಿಭಾಗ, ಇತ್ಯಾದಿ ಒದಗಿಸದೆ ಇರುವುದರಿಂದ ನ್ಯಾಯಾಲಯವು ನಿರೀಕ್ಷಿತ ಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂಬುದು ವಿಷಾಧನೀಯ. ವಿಶೇಷ ನ್ಯಾಯಾಲಯದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸದಸ್ಯರು ಮತ್ತು ಸಿಬ್ಬಂದಿಗೆ ವೇತನ ವಿತರಣೆ, ವಾಹನ ಸೌಲಭ್ಯ ಮತ್ತು ದಿನನಿತ್ಯದ ಕಚೇರಿ ಅಗತ್ಯಗಳೂ ಸಿಗುತ್ತಿಲ್ಲವೆಂಬುದು ನಮಗೆ ತಿಳಿದು ಬಂದಿದೆ. ನಾವು ಈಗಾಗಲೇ ಈ ವಿಷಯದ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು, ವಿಶೇಷ ನ್ಯಾಯಾಲಯವು ತನಿಖೆ, ಅಭಿಯೋಜನೆ ಮತ್ತು ಅಧಿವಿಚಾರಣೆಯಲ್ಲಿ ಯಾವ ನ್ಯೂನತೆಯೂ ಇರದಂತೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಬೇಕಾದ ಎಲ್ಲಾ ಸೌಲಭ್ಯಗಳನ್ನೂ ಒದಗಿಸುವಂತೆ ವಿನಂತಿಸಿದ್ದೇವೆ.

2007ರಲ್ಲಿ ಜಂಟಿ ಸದನ ಸಮಿತಿಗೆ ಸರ್ಕಾರಿ ಭೂಮಿಯ ಒತ್ತುವರಿ/ಕಬಳಿಕೆಯ ಮಾಹಿತಿ ಆಯಾ ಇಲಾಖೆಯ ಅಧಿಕಾರಿಗಳೇ ಒದಗಿಸಿರುತ್ತಾರೆ. ನಂತರ ಸರ್ಕಾರ ರಚಿಸಿದ ಶ್ರೀ ವಿ. ಬಾಲಸುಬ್ರಮಣಿಯನ್ ಅಧ್ಯಕ್ಷರಾಗಿದ್ದ *'ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆ'* ಗೂ ಸಹ ಅಧಿಕಾರಿಗಳೇ ಮಾಹಿತಿ ಒದಗಿಸಿದ್ದು, ಅದು ಇಡೀ ರಾಜ್ಯದಲ್ಲಿನ ಒತ್ತುವರಿ/ಕಬಳಿಕೆಗೆ ಸಂಬಂಧಿಸಿರುತ್ತದೆ. ಇದಲ್ಲದೆ, ಪ್ರಾದೇಶಿಕ ಆಯುಕ್ತರು, ಬೆಂಗಳೂರುವಿಭಾಗ, ಇವರು *'ಬೆಂಗಳೂರು ಜಿಲ್ಲೆ, ಸರ್ಕಾರದ ಜಾಮೀನು ಖಾಸಗಿಯವರಿಗೆ ಹಕ್ಕು ದಾಖಲೆ , ಪರಿಶೀಲನಾ ವರದಿ'*ಯ ಸಂಪುಟ ಒಂದರಲ್ಲಿ, 382 ಪ್ರಕರಣಗಳಲ್ಲಿ ವಿಶೇಷ ಜಿಲ್ಲಾಧಿಕಾರಿಗಳು ತಪ್ಪು ಆದೇಶ ಹೊರಡಿಸಿರುವುದಾಗಿ ತಿಳಿಸಿರುತ್ತಾರೆ (ಅನುಬಂಧ -2). ದಿನಾಂಕ 9.5.2011 ರಂದು ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆಯ ಅಧ್ಯಕ್ಷರಾದ ಶ್ರೀ ವಿ. ಬಾಲಸುಬ್ರಮಣಿಯನ್ ರವರು ಅಂದಿನ ಮುಖ್ಯ ಕಾರ್ಯದರ್ಶಿಗಳಾದ ಶ್ರೀ. ಎಸ್. ವಿ. ರಂಗನಾಥ್ ರವರಿಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಆಡಳಿತ ಸಂಪೂರ್ಣ ಕುಸಿದಿರುವ ಬಗ್ಗೆ ವಿಸ್ತೃತವಾದ ಪತ್ರ ಬರೆದಿದ್ದಾರೆ (ಅನುಬಂಧ -3). ಆ ಪತ್ರದಲ್ಲಿ ಅಂದಿನ ಬೆಂಗಳೂರಿನ ವಿಶೇಷ ಜಿಲ್ಲಾಧಿಕಾರಿಗಳ ಅಪಾಯಕಾರಿಯಾದ ವರ್ತನೆಯಿಂದ ಉಂಟಾಗಬಹುದಾದ ಹಾನಿಗಳನ್ನು ಪ್ರಸ್ತಾಪಿಸುತ್ತಾ ಈ ರೀತಿ ಬರೆದಿರುತ್ತಾರೆ:

> ***... 7. For instance, it has come to my notice that, recently 60,000 files relating to Bangalore Urban District have been transferred from the record room of the Bangalore Rural DC in the VV Towers to the Bangalore Urban DC's office. Of these, 11,000 files are relating to Land Grants. The Additional DC (previously known as***

***HQA to DC) Shri B.Nanjundeshwar,KAS,brought to me a sample of these files and showed me that in all these Land Grant cases, there is no application, no recommendation and no building up of proposals from the level of Tahasildars, survey sketch maps, etc., as required by the Land Grant Rules but there is only one sheet of paper granting the land by the then Special Deputy Commissioners by an Office Memorandum.***

***8. The ADC therefore strongly suspected that these are bogus grants, mostly relating to Jala Hobli close to the International Airport. I had asked him to prepare a statement showing the names of grantees, survey number, acreage, village, etc. and the required documents not in the file and the nature of illegality so that the magnitude of the problem can be assessed. This process started about one month ago. A few days ago Mr. Nanjundeshwara, ADC was transferred.***

**....**

**ದಿನಾಂಕ 14.9.2015 ರಲ್ಲಿ ಕರ್ನಾಟಕ ಸಾರ್ವಜನಿಕ ಜಾನೀನುಗಳ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಸುಬೋಧ್ ಯಾದವ್, ಐಎಎಸ್, ರವರು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಾದ ಶ್ರೀ. ವಿ. ಶಂಕರ್ ರವರಿಗೆ ಪತ್ರ ಬರೆದು, ಅಕ್ರಮ ಹಾಗೂ ಅನಧಿಕೃತ ಭೂ ಮಂಜೂರಾತಿ ಕಡತಗಳನ್ನು ಸೃಷ್ಟಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಚೇರಿಗೆ ವರ್ಗಾಯಿಸಿರುವ ಪ್ರಕರಣಗಳ ಬಗ್ಗೆ ಜರುಗಿಸಿದ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವಂತೆ ಕೋರಿರುತ್ತಾರೆ. (ಅನುಬಂಧ -4). ಆ ಪತ್ರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಬೆಂಗಳೂರು ನಗರ ಜಿಲ್ಲೆಗೆ ಕಡತಗಳ ವರ್ಗಾವಣೆ ಸಮಯದಲ್ಲಿ ದೊರೆತ ಸೃಷ್ಟಿತ ಹಾಗೂ ಅಕ್ರಮ ಭೂ ಮಂಜೂರಾತಿ ಕಡತಗಳಿಗೆ ಸಂಬಂಧಪಟ್ಟಂತೆ 1437 ಎಕರೆ 38 ಗುಂಟೆ ಸರ್ಕಾರಿ ಜಮೀನಿಗೆ ಖಾಸಗಿ ವ್ಯಕ್ತಿಗಳ ಹೆಸರಿಗೆ ಆಗಿರುವ ಖಾತೆ ಬದಲಾವಣೆಯ ವಿಚಾರವಾಗಿ ದಿನಾಂಕ 24.11.2012ರಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಪತ್ರ ಬೆರೆದು ಕೆಲವೊಂದು ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸಿರುವುದರ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಆ ಪತ್ರದಲ್ಲಿ ನಿಗಮ ಹಿಂದೆ 2013 ರಿಂದ ಜಿಲ್ಲಾಧಿಕಾರಿಗಳು ಜರುಗಿಸಿದ ಕ್ರಮಗಳ ಬಗ್ಗೆ ವಿವರಣೆ ಕೇಳಿ ಮಾಹಿತಿ ಕೋರಿದ ಹಲವಾರು ಪತ್ರಗಳನ್ನು ಉಲ್ಲೇಖಿಸಿ, ಮಾಹಿತಿ ಒದಗಿಸದೇ ಇದ್ದಲ್ಲಿ ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಿರುತ್ತಾರೆ.**

**ಮೇಲೆ ಹೇಳಿರುವ ಅಂಶಗಳಿಂದ ಕರ್ನಾಟಕದಲ್ಲಿ ಭ್ರಷ್ಟ ಅಧಿಕಾರಿಗಳ ಶಾಮೀಲಿನೊಂದಿಗೆ ಸರ್ಕಾರಿ ಭೂಮಿಗಳಿಗೆ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಕಬಳಿಸಿರುವ ಹಗರಣವು ಆಳದವರೆಗೂ ಬೇರು ಬಿಟ್ಟಿರುವುದು ಸ್ಪಷ್ಟವಾಗುತ್ತದೆ. ಗೌರವಾನ್ವಿತರಾದ ತಮ್ಮ**

ಅಧ್ಯಕ್ಷತೆಯಲ್ಲಿ ವಿಶೇಷ ನ್ಯಾಯಾಲಯ ಕಾರ್ಯಾರಂಭ ಮಾಡಿದನಂತರ ಮಾತ್ರ ಇಲಾಖೆಯಾದ ಕಂದಾಯ ಇಲಾಖೆಯು ಲಭ್ಯವಿರುವ ಎಲ್ಲಾ ಭೂಕಬಳಿಕೆ ಪ್ರಕರಣಗಳ ಮಾಹಿತಿಯನ್ನು ತಮಗೆ ಒದಗಿಸಬೇಕಾಗಿತ್ತು ಮತ್ತು ವಿವಿಧ ಇಲಾಖೆಗಳ ವಶದಲ್ಲಿರುವ ಸರ್ಕಾರಿ ಭೂಮಿಗಳ ಕಬಳಿಕೆಯ ಮಾಹಿತಿಯನ್ನು ವಿಶೇಷ ನ್ಯಾಯಾಲಯಕ್ಕೆ ಒದಗಿಸುವಂತೆ ಎಲ್ಲಾ ಇಲಾಖೆಗಳಿಗೂ ನಿರ್ದೇಶನ ನೀಡಬೇಕಿತ್ತು. ಇದಲ್ಲದೆ, ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುವ ಭೂಕಬಳಿಕೆ ಪ್ರಕರಣಗಳನ್ನು ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಲು ಕ್ರಮ ತೆಗೆದುಕೊಳ್ಳಬೇಕಿತ್ತು. ಆದರೆ ಸರ್ಕಾರವು ಇದ್ಯಾವುದರ ಬಗ್ಗೆಯೂ ಗಮನ ಹರಿಸದೆ ಇರುವುದು ಅತ್ಯಂತ ವಿಷಾಧನೀಯ.

ಆದ್ದರಿಂದ, ಸನ್ಮಾನ್ಯರಾದ ತಾವು ತಮ್ಮ ಅಧಿಕಾರವನ್ನು ಬಳಸಿ ಮೇಲೆ ತಿಳಿಸಿರುವ ವರದಿಗಳು, ಪತ್ರಗಳು, ಕಡತಗಳು, ಇತ್ಯಾದಿಗಳನ್ನು ಸರ್ಕಾರದಿಂದ ತರಿಸಿಕೊಂಡು, ಎಲ್ಲವನ್ನೂ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇವೆ. ಬಹುತೇಕ ಪ್ರಕರಣಗಳ ಸಂಪೂರ್ಣ ಮಾಹಿತಿ ಇಲಾಖೆಗಳಲ್ಲೇ ಲಭ್ಯವಿರುವುದರಿಂದ ಸಾರ್ವಜನಿಕರು ವಿಶೇಷ ನ್ಯಾಯಾಲಯಕ್ಕೆ ದೂರುಗಳನ್ನು ಸಲ್ಲಿಸಿ ಮಾಹಿತಿ ಒದಗಿಸಬೇಕಾದ ಅಗತ್ಯವಿರುವುದಿಲ್ಲ. ದಯವಿಟ್ಟು ಸನ್ಮಾನ್ಯರಾದ ತಾವು ಅಧಿಕಾರಿಗಳಿಂದ ಮಾಹಿತಿ ತರಿಸಿಕೊಂಡು, ಅದನ್ನು ತನಿಖೆಗೆ ಒಳಪಸಿಡಿಸಿ ಲಕ್ಷಾಂತರ ಎಕರೆ ಅಮೂಲ್ಯವಾದ ಸರ್ಕಾರಿ ಭೂಮಿಯನ್ನು ಸರ್ಕಾರದ ವಶಕ್ಕೆ ಬರುವಂತೆ ಕ್ರಮ ತೆಗೆದುಕೊಳ್ಳುತ್ತೀರೆಂದು ದೃಢವಾಗಿ ನಂಬಿದ್ದೇವೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿಗಳು

(ಎ.ಟಿ. ರಾಮಸ್ವಾಮಿ) (ಡಾ. ಎಚ್. ಎಸ್ .ದೊರೆಸ್ವಾಮಿ)

ಸಂಚಾಲಕರು ಗೌರವಾಧ್ಯಕ್ಷರು

ಲಗತ್ತುಗಳೊಂದಿಗೆ ಯಥಾ ನಕಲನ್ನು ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ :

1. ಸನ್ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು, ಗೌರವಾನ್ವಿತ ಕಂದಾಯ ಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು
2. ಸನ್ಮಾನ್ಯ ಟಿ. ಬಿ. ಜಯಚಂದ್ರರವರು , ಗೌರವಾನ್ವಿತ ಕಾನೂನು ಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು
3. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ , ಬಹುಮಹಡಿ ಕಟ್ಟಡ, ಬೆಂಗಳೂರು